ಕೊಡೆ... ಕೊಡುವುದು, ಛತ್ರಿ
ಗಂಡ ತನ್ನ ಹೆಂಡತಿಗೆ ನನಗೆ ಬೇಗ ಬೆಳಿಗ್ಗೆ ತಿಂಡಿ ಮಾಡಿಕೊಡೆ ಎಂದು ಹೇಳಿದನು.
ಮಳೆಗಾಲದಲ್ಲಿ ಕೊಡೆ ಹಿಡಿದುಕೊಂಡು ಹೋಗುವುದು ಬಹಳ ಅಗತ್ಯ.

ಮಡಿ... ಸಾಯು, ಮಡಿವಂತಿಕೆ
ಅಭಿಮನ್ಯು ಚಕ್ರವ್ಯೂಹದಲ್ಲಿ ವೀರ ವೇಷದಿಂದ ಹೋರಾಡಿ ಮಡಿದನು.
ಬ್ರಾಹ್ಮಣರು ಮಡಿವಂತಿಕೆ ಮಾಡುತ್ತಾರೆ.

ವರ್ಣ........ ಬಣ್ಣ, ಅಕ್ಷರ, ಹಿಂದುಗಳ ನಾಲ್ಕು ವಿಭಾಗಗಳ ವರ್ಣವ್ಯವಸ್ಥೆ.
ಕಾಮನಬಿಲ್ಲಿನಲ್ಲಿ ಏಳು ಬಣ್ಣಗಳಿವೆ.
ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ.
ವೇದಗಳಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಎಂಬ ನಾಲ್ಕು ವರ್ಣ ವಿಭಾಗಗಳ ಉಲ್ಲೇಖವಿದೆ.

ಅರಸು: ರಾಜ ಹುಡುಕು
ಮೌರ್ಯರ ಪ್ರಸಿದ್ಧ ಅರಸು ಅಶೋಕ.
ಆನೆಗಳು ಆಹಾರವನ್ನು ಅರಸುತ್ತಾ ಕಾಡಿನಲ್ಲಿ ಓಡಾಡುತ್ತವೆ.

ತೊರೆ... ಬಿಡು ತ್ಯಜಿಸು ಬಿಟ್ಟು ಹೋಗು, ಹಳ್ಳ ನದಿ
ರಾಮನು ಅಯೋಧ್ಯೆಯನ್ನು ತೊರೆದು ಕಾಡಿಗೆ ಹೋದನು. ಕಾಡಿನಲ್ಲಿ ತೊರೆ ಹಳ್ಳ ಕೊಳ್ಳಗಳ ದಾಟುತ್ತಾ ಮುನ್ನಡೆದನು.

ದೋಣಿ ಸಾಗಲಿ ಮುಂದೆ ಹೋಗಲಿ
ದೂರ ತೀರವ ಸೇರಲಿ
ಬೀಸುಗಾಳಿಗೆ ಬೀಳು ತೇಲುತ
ತೆರೆಯ ಮೇಲ್ಗಡೆ ಹಾಯಲಿ

**ನಮ್ಮ ಶಾಲೆಯ ವಾರ್ಷಿಕೋತ್ಸವದ ವರದಿ**

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಡಗನೂರಿನಲ್ಲಿ 31 2023 ರಂದು ಶಾಲಾ ವಾರ್ಷಿಕೋತ್ಸವವನ್ನು ಏರ್ಪಡಿಸಲಾಗಿತ್ತು ವಾರ್ಷಿಕೋತ್ಸವದ ದಿನ ನಾವೆಲ್ಲರೂ ಒಳ್ಳೆಯ ವಸ್ತ್ರಗಳನ್ನು ಹುಟ್ಟುಕೊಂಡು ವಾರ್ಷಿಕೋತ್ಸವಕ್ಕೆ ಹಾಜರಾಗಿದ್ದವು. ನಮ್ಮ ಎಲ್ಲಾ ಪೋಷಕರು ಆಗಮಿಸಿದ್ದರು ಅತಿಥಿ ಗಣ್ಯರು ಕೂಡ ಆಗಮಿಸಿದ್ದರು ಪಂಚಾಯತಿ ಸದಸ್ಯರು ಎಸ್ ಡಿ ಎಂ ಸಿ ಸದಸ್ಯರು ನಮಗೆಲ್ಲ ಒಳ್ಳೆಯ ಗೌರವದಿಂದ ಕಾಣುತ್ತಿದ್ದರು ಎಲ್ಲಾ ಪೋಷಕರಿಗೂ ಮಕ್ಕಳಿಗೂ ಗ್ರಾಮ ಪಂಚಾಯತಿ ಸದಸ್ಯರಿಗೂ ಊಟದ ವ್ಯವಸ್ಥೆ ಏರ್ಪಡಿಸಲಾಗಿತ್ತು ಮಧ್ಯಾಹ್ನ ಊಟವಾದ ನಂತರ ನಾಲ್ಕು ಗಂಟೆಯಿಂದ ಕಾರ್ಯಕ್ರಮಗಳು ಪ್ರಾರಂಭವಾದವು ಮುಖ್ಯ ಅತಿಥಿಗಳಾಗಿ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಗಮಿಸಿದ್ದರು ಭೆಯ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷರು ವಹಿಸಿದ್ದರು ಸದಸ್ಯರು ಗ್ರಾಮಸ್ಥರು ಸಭೆಗೆ ಆಗಮಿಸಿದ್ದರು. ಮೊದಲಿಗೆ ನಮ್ಮ ಶಾಲೆಯ ಮುಖ್ಯ ಶಿಕ್ಷಕರು ಸ್ವಾಗತವನ್ನು ಮಾಡಿದರು ಪ್ರಾರ್ಥನೆಯೊಂದಿಗೆ ಶುರುವಾದ ವಾರ್ಷಿಕೋತ್ಸವದಲ್ಲಿ ಅತಿಥಿಗಳು ಭಾಷಣ ಮಾಡಿದರು ಅಧ್ಯಕ್ಷರು ಕೂಡ ಭಾಷಣ ಮಾಡಿದರು ಉದ್ಘಾಟನೆ ಸಮಾರಂಭ ಮುಗಿದ ನಂತರ ನಾವೆಲ್ಲರೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲಾ ಪೋಷಕರನ್ನು ಸದಸ್ಯರನ್ನು ರಂಜಿಸಿದೆವು. ಎಲ್ಲಾ ಪೋಷಕರು ತಮ್ಮ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ಕಣ್ತುಂಬಿ ಕೊಂಡರು ಮುಖ್ಯ ಶಿಕ್ಷಕರು ಹಾಗೂ ಎಲ್ಲಾ ಶಿಕ್ಷಕರು ಎಸ್‌ಡಿಎಂಸಿ ಅಧ್ಯಕ್ಷರು ಸದಸ್ಯರು ಎಲ್ಲರೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಊರಿನ ಎಲ್ಲಾ ಗ್ರಾಮಸ್ಥರಿಗೆ

ವಂದನೆಗಳನ್ನು ಸಲ್ಲಿಸಿದರು.

ಮಕ್ಕಳೇ ಸರ್ಕಾರಿ ಶಾಲೆಗೆ ಸೇರಿ ಸುಮ್ಮನೆ ಕಾನ್ವೆಂಟ್ ಗೆ ಹೋಗಿ ನಿಮ್ಮ ತಂದೆ ತಾಯಿಗಳ ಹಣ ಪೋಲು ಮಾಡಬೇಡಿ ಸರ್ಕಾರಿ ಶಾಲೆಯಲ್ಲಿ ಕನ್ನಡ ಇಂಗ್ಲಿಷ್ ಹಿಂದಿ ಮೂರು ಭಾಷೆಗಳನ್ನು ಕಲಿಸಲಾಗುತ್ತದೆ ಇಲ್ಲಿ ಉಚಿತ ಸಮವಸ್ತ್ರ ಮಧ್ಯಾಹ್ನದ ಬಿಸಿಊಟ ಹಾಲು ಮೊಟ್ಟೆ ಇತ್ಯಾದಿ ಸರ್ಕಾರಿ ಸೌಲಭ್ಯಗಳು ಸಿಗುತ್ತವೆ. ಜೊತೆಗೆ ನುರಿತ ಶಿಕ್ಷಕರು ಇಲ್ಲಿ ನಿಮಗೆ ವಿದ್ಯಾಭ್ಯಾಸ ಹೇಳಿಕೊಡುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಕನ್ನಡವನ್ನು ಕಲಿಯುತ್ತೀರಿ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿದ ಹೆಮ್ಮೆ ನಿಮ್ಮದಾಗುತ್ತದೆ.

ಈ ಪದ್ಯದಲ್ಲಿ ಪುಟಾಣಿ ಪಾಪು ಮಾಡುವ ಅತ್ಯುನ್ನತ ಕೆಲಸವನ್ನು ತಿಳಿಸಿದ್ದಾರೆ ಪುಟಾಣಿ ಪಾಪು, ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಬೆಟ್ಟದ ಮೇಲೆ ಹತ್ತಿ ಹೋಗುತ್ತಾನೆ ಅಲ್ಲಿ ಮೋಡಗಳನ್ನು ಕರೆದು ಪಕ್ಕದಲ್ಲಿ ಕೂರಿಸಿಕೊಳ್ಳುತ್ತಾನೆ ಕೂರಿಸಿಕೊಂಡು ಮೋಡಗಳ ಜೊತೆಗೆ ಮಾತನಾಡುತ್ತಾನೆ ಯಾರೆಂದರೆ ಈತ ಯಾರೆಂದರೆ ಪಾಪು ಪುಟಾಣಿ ಪಾಪು. ಅಂದರೆ ಪಾಪು ನಡೆದಾಡುವುದೇ ಒಂದು ದೊಡ್ಡ ಕೆಲಸ ಅದು ಪುಟ್ಟ ಪುಟ್ಟ ಹೆಜ್ಜೆ ಇಟ್ಟು ನಡೆದರೆ ಅದೇ ಬೆಟ್ಟದ ಮೇಲೆ ಹತ್ತಿದ ಹಾಗೆ ಹಾಗೂ ಆಕಾಶಕ್ಕೆ ನೋಡಿದರೆ ಮೋಡವೇ ಹತ್ತಿರ ಬಂದಂತೆ.

ಇವನು ರೈತ ಅನ್ನದಾತ ಹೊಲದಲ್ಲಿ ದುಡಿಯುವನು ನಾಡಿನ ಜನರು ಬದುಕಲು ದವಸ ಧಾನ್ಯಗಳನ್ನು ಬೆಳೆಯುತ್ತಾನೆ. ಗುಡುಗು ಸಿಡಿಲು ಮಳೆ ಗಾಳಿ ಚಳಿಗೆ ನಡುಗಿ ಬಿಸಿಲ ಬೇಗೆಯನ್ನು ಸಹಿಸುತ್ತಾ ಬೆವರು ಸುರಿಸಿ ಕಷ್ಟಗಳನ್ನು ಸಹಿಸಿ ಒಂದೇ ಸಮನೆ ದುಡಿಯುತ್ತಾನೆ. ಅನ್ನವನ್ನು ನೀಡುವ ಅವನು ಯೋಗಿ ಮತ್ತು ತ್ಯಾಗಿಯಾಗಿದ್ದಾನೆ. ಅವನ ಇಬ್ಬರೂ ಗೆಳೆಯರೆಂದರೆ ಜೋಡೆತ್ತುಗಳು ಜೋಡಿತ್ತುಗಳು ಎಷ್ಟೇ ಕಷ್ಟ ಬರಲಿ ಹೊಂದಿಕೊಂಡು ನಡೆಯುವರು ಕಷ್ಟಗಳನ್ನು ಸಹಿಸಿ ಅವನ ದೇಹ ಗಟ್ಟಿಯಾಗಿದೆ ಒಳಗೆ ದೊಡ್ಡ ಮನಸ್ಸಿದೆ ಇದೆಲ್ಲ ಆ ದೇವನ ಕೃಪೆ.

ಉತ್ತು ಬಾಳುವವನ ಬಾಳು ಎತ್ತಲೂ ಲೇಸು.
ಕೈ ಕೆಸರಾದರೆ ಬಾಯಿ ಮೊಸರು.

ರಾಜು.. ಈ ಮರದಲ್ಲಿ ಎಷ್ಟೊಂದು ಮಾವಿನ ಹಣ್ಣುಗಳಿವೆ ಹಾಗೂ ಅಲ್ಲಿ ಏಣಿಯಿದೆ ಅದನ್ನು ತರುವ
ಸುಮಾ... ಆಯಿತು ತಂದು ನಮಗೆ ಬೇಕಾದಷ್ಟು ಮಾವಿನ ಹಣ್ಣನ್ನು ಕೀಳೋಣ
ರಾಜು ... ಏಣಿಯನ್ನು ಗಟ್ಟಿಯಾಗಿ ಹಿಡಿದುಕೋ ನಾನು ಹತ್ತುತ್ತೇನೆ.
ಸುಮಾ... ಜಾಗ್ರತೆ ನಿಧಾನವಾಗಿ
ರಾಜು ..... ಆ ಹತ್ತಿದೆ ಓಹೋ ಎಂತಹ ಹಣ್ಣುಗಳು (ತಿನ್ನುವನು)
ಸುಮಾ.... ಎ ರಾಜು ನನಗೂ ಕೊಡೋ ನನಗೂ ಕಿತ್ತು ಕೆಳಗೆ ಹಾಕು.
ರಾಜು... ಇಲ್ಲಾ ಹಾಕುವುದಿಲ್ಲ ನೀನು ಹತ್ತಿ ಕಿತ್ತುಕೋ.
ಸುಮಾ.... ಯಲಾ ಕಳ್ಳ ತಡಿ ಮಾಡುತ್ತೇನೆ (ಏಣಿ ತೆಗೆದು ದೂರ ವಯ್ಯುವಳು)
ರಾಜು .... 'ಅಯ್ಯೋ ನನಗೆ ಇಳಿಯಲು ಆಗುವುದಿಲ್ಲ ಸಾರೀ ಹೇಳಿ ತೆಗೆದುಕೊಂಡು ಬಾ ನಿನಗೂ ಹಣ್ಣು ಕಿತ್ತು ಹಾಕುತ್ತೇನೆ ಇಗೋ ತೆಗೆದುಕೋ ಹಣ್ಣುಗಳು'
ಸುಮಾ... ಹೀಗೆ ಬಾ ದಾರಿಗೆ ಮೊದಲೇ ಕಿತ್ತು ಹಾಕಿದ್ದರೆ ಏನು ಆಗುತ್ತಿತ್ತು ನಿನಗೆ ಈಗ ಏಣಿಯನ್ನು ಹಾಕುವೆ ಇಳಿದು ಬಾ
ರಾಜು.... ಆಯ್ತು ನನ್ನಕ್ಕ ನಿನಗೂ ಹಣ್ಣುಗಳು ನನಗೂ ಹಣ್ಣುಗಳು ತೆಗೆದುಕೋ ತಪ್ಪಾಯ್ತು ಇನ್ನು ಮೇಲೆ ಹೀಗೆ ಮಾಡುವುದಿಲ್ಲ
ಸುಮಾ.... ಇರಲಿ ಬಾ ರಾಜು ಹಣ್ಣನ್ನು ತೆಗೆದುಕೊಂಡು ಹೋಗಿ ತಂದೆ ತಾಯಿಗೆ ಅಕ್ಕಪಕ್ಕದವರಿಗೆ ಹಂಚೋಣ.

ನಾನು.. ಸಾರ್ ನನಗೆ ನಾಳೆಯಿಂದ ನಾಲ್ಕು ದಿನ ರಜೆ ಬೇಕಾಗಿದೆ.
ಶಿಕ್ಷಕರು... ಏನು ನಾಲ್ಕು ದಿನಗಳು ಅಷ್ಟೊಂದು ದಿನ ಯಾಕೆ ರಜೆ?
ನಾನು ... ಸಾರ್ ನಾವು ಕುಟುಂಬ ಸಮೇತ ತಿರುಪತಿ ಪ್ರವಾಸಕ್ಕೆ ಹೊರಟಿದ್ದೇವೆ ಆದ್ದರಿಂದ ನನಗೆ ನಾಲ್ಕು ದಿನ ರಜೆ ಮಂಜೂರು ಮಾಡಿಕೊಡಿ ಸಾರ್.
ಶಿಕ್ಷಕರು ... ಏಪ್ರಿಲ್ ಮೇ ನಲ್ಲಿ ರಜೆ ಇರುತ್ತದೆ ಅಕ್ಟೋಬರ್ ನಲ್ಲಿ ರಜೆ ಇರುತ್ತದೆ ಆಗ ಹೋಗುವುದು ಬಿಟ್ಟು ಈಗ ಶಾಲೆಯ ಸಮಯದಲ್ಲಿ ನಾಲ್ಕು ದಿನಗಳು ಹೋಗುವುದೇ.
ನಾನು .... ಸರ್ ನಮ್ಮ ತಂದೆ ತಾಯಿಗಳು ಅದನ್ನು ಫಿಕ್ಸ್ ಮಾಡಿದ್ದಾರೆ ಸರ್
ಶಿಕ್ಷಕರು .. . ಮತ್ತು ನಿನ್ನ ಹೋಂ ವರ್ಕ್ ನೋಟ್ಸ್ ಹೇಗೆ ಕಂಪ್ಲೀಟ್ ಮಾಡುವೆ.
ನಾನು ...... ಸಾರ್ ನಾನು ಬಂದ ಮೇಲೆ ನನ್ನ ಸಹಪಾಠಿಗಳ ಹತ್ತಿರ ನೋಟ್ಸ್ ತೆಗೆದುಕೊಂಡು ಬರೆದು ತೋರಿಸುವೆ ಸರ್
ಶಿಕ್ಷಕರು..... ಆಯಿತು ಹೋಗಿ ಬಾ ನಾಲ್ಕು ದಿನ ಆದಮೇಲೆ ಐದನೇ ದಿನ ಸರಿಯಾಗಿ ಶಾಲೆಗೆ ಬಾ ಇನ್ನು ಮುಂದೆ ಶಾಲೆಯ ಸಮಯದಲ್ಲಿ ಪ್ರವಾಸ ಇಟ್ಟುಕೊಳ್ಳಬೇಡಿ ಎಂದು ನಿಮ್ಮ ತಂದೆ ತಾಯಿಗಳಿಗೆ ತಿಳಿಸು.

ನಮ್ಮ ಜೀವನದ ಪ್ರತಿ ಮಾತು ಕೂಡ ಸತ್ಯದಿಂದ ಕೂಡಿರಬೇಕು. ನಮ್ಮ ನಡೆ ನುಡಿಯು ಕೂಡ ಸತ್ಯದಿಂದ ಕೂಡಿರಬೇಕು. ಇದರಿಂದ ಆ ಪರಮಾತ್ಮನು ಮೆಚ್ಚುತ್ತಾನೆ.

ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.
ಒಂದು ಸುಳ್ಳು ಸಾವಿರ ಸುಳ್ಳಿಗೆ ದಾರಿ

ಸ್ವಚ್ಛತೆಯ ಸೇವೆ, ಕೊಳಕು ಒಂದು ನರಕ
ಪ್ರತಿಯೊಬ್ಬ ಪ್ರಜೆಯು ಸ್ವಚ್ಛ ಭಾರತದ ಕನಸು ಕಾಣಬೇಕು.
ನಮ್ಮ ಭಾರತ ಸ್ವಚ್ಛವಾಗಬೇಕು. ಸ್ವಚ್ಛತೆಗೆ ಎಲ್ಲರೂ ಕೈಜೋಡಿಸೋಣ.
ಸ್ವಚ್ಛತೆಯೆಲ್ಲಿದೆಯೋ ಅಲ್ಲಿದೆ ಆರೋಗ್ಯ.
ಸ್ವಚ್ಛ ಭಾರತ ಶ್ರೇಷ್ಠ ಭಾರತ
ಸ್ವಚ್ಛ ದೇಹ ಸ್ವಚ್ಛ ಮನಸ್ಸು
ಸ್ವಚ್ಛತೆಯೆಲ್ಲಿದಿಯೋ ಅಲ್ಲಿ ದೇವರು ನೆಲೆಸಿರುತ್ತಾನೆ.

**ಸ್ವಚ್ಛತೆಯೇ ಸೇವೆ ಕೊಳಕು ಒಂದು ನರಕ**

ಇದರರ್ಥ ಸ್ವಚ್ಛವಾಗಿರುವುದನ್ನು ನಾವು ಸೇವೆ ಎಂದು ತಿಳಿಯಬೇಕು ವೈಯಕ್ತಿಕ ಸ್ವಚ್ಛತೆಯನ್ನು ಗಮನದಲ್ಲಿಟ್ಟುಕೊಂಡರೆ ನಮ್ಮ ಉಗುರುಗಳನ್ನು ತೆಗೆದುಕೊಳ್ಳುವುದು ನಾವು ಪ್ರತಿದಿನ ಸ್ನಾನ ಮಾಡುವುದು ನಾವು ಒಳ್ಳೆಯ ಶುಭವಾದ ಬಟ್ಟೆಗಳನ್ನು ಧರಿಸುವುದು ತಲೆ ಬಾಚುವುದು ಎಣ್ಣೆ ಹಚ್ಚುವುದು ಮುಖ ತೊಳೆಯುವುದು ಊಟಕ್ಕಿಂತ ಮುಂಚೆ ಚೆನ್ನಾಗಿ ಕೈ ತೊಳೆಯುವುದು ಇವೆಲ್ಲವೂ ಕೂಡ ನಮಗೆ ನಾವು ಮಾಡಿಕೊಳ್ಳುವ ಸೇವೆಯಾಗಿದೆ.

ಇದನ್ನು ಹೊರತುಪಡಿಸಿ ಕೊಳಕು ಒಂದು ನರಕವಾಗಿದೆ ಎಲ್ಲಿ ನಾವು ಕೊಳಕಾಗಿರುತ್ತೇವೆಯೋ ಅಲ್ಲಿ ರೋಗಗಳು ಹರಡುವುದು

ಮಾಮೂಲಾಗುತ್ತದೆ ನಾವು ನಮ್ಮ ಸುತ್ತಮುತ್ತಲು ಗಮನಿಸಿದಾಗ ಯಾರು ಕೊಳಕುತನದಿಂದ ಕೂಡಿರುತ್ತಾರೆ ಅವರಿಗೆ ರೋಗಗಳು ಸುತ್ತುವರಿದಿರುತ್ತವೆ ಹಾಗಾಗಿ ಕೊಳಕನ್ನು ತೊಡೆಯೋಣ ಸ್ವಚ್ಛತೆಯನ್ನು ಅನುಭವಿಸೋಣ ಮತ್ತು ಸ್ವಚ್ಛತೆಯನ್ನು ಅನುಸರಿಸೋಣ